ನಮ್ಮ ಮುಂದೆ ಇರತಕ್ಕ ಪೇಪರ್ಸ್‌ಗಳನ್ನು ತಾವು ವಿಲೇ ಮಾಡಿ ಎಂದಾದರೂ ಹೇಳಬೇಕು ಅಥವಾ ಸರ್ಕಾರದ ಪರವಾಗಿ ಯಾರಾದರೂ ಒಬ್ಬರು ಮೊದಲೇ ಎದ್ದುನಿಂತ ಸರ್ಕಾರದ ಪರವಾಗಿ ನಾವು ಈ ಜವಾಬ್ದಾರಿ ವಹಿಸಿಕೊಳ್ಳುತ್ತೇವೆಂದು ಹೇಳಬಹುದು. ಇಷ್ಟು ರಿಜ್ಯುಯಲ್ ಆಗಿ ಮಾಡತಕ್ಕಂಥದ್ದು ನನಗೇನೋ ಪರವಾಗಿಲ್ಲ. ಆದರೆ ಈ ಸ್ಥಾನದ ಗೌರವವನ್ನು ದಯಮಾಡಿ ಕಾಪಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ :— ಅಲ್ಲಿ ಒಬ್ಬಿಬ್ಬರು ಇರಬಹುದು. ಸುಮ್ಮನೆ ಇದಕ್ಕೆ ಏತಕ್ಕೆ ನಾಟಕ ಮಾಡುತ್ತೀರಿ ಅಲ್ಲಿದ್ದಾರೆ ಎಂದು ಹೇಳಿ.

ಶ್ರೀ ಸಿದ್ಧರಾಮಯ್ಯ :— ಎಲ್ಲಕ್ಕೂ ನಾಟಕಾವಾ? ನಾಟಕ ಎಂದರೇನು?

ಶ್ರೀ ಕೆ.ಎಸ್. ಈಶ್ವರಪ್ಪ :— ಮತ್ತಿನ್ನೇನು ಬೇರೆ? ಇಲ್ಲ ಎಂದು ಒಪ್ಪಿಕೊಳ್ಳಿ. ಎಲ್ಲಾ ಬೇರೆ ಕೆಲಸಗಳಿಗೆ ಹೋಗಿದ್ದಾರೆ. ಗುಂಪುಗಾರಿಕೆಗೆ ಹೋಗಿದ್ದಾರೆ. ಆ ಗುಂಪಿನ ಜೊತೆ ಹೋಗಿದ್ದಾರೆ, ಈ ಗುಂಪಿನ ಜೊತೆ ಹೋಗಿದ್ದಾರೆ ಎಂಬ ಇರತಕ್ಕ ವಿಚಾರವನ್ನು ತಿಳಿಸಿ. ಮಂತ್ರಿಗಳು ಅವರು ತಮ್ಮ ಜವಾಬ್ದಾರಿ ಹೊರಲು ವಿಫಲರಾಗಿದ್ದಾರೆಂದು ಒಪ್ಪಿಕೊಳ್ಳಿ.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) :— ಅಧ್ಯಕ್ಷರೇ, ಮೊದಲನೇ ಪಟ್ಟಿಯಲ್ಲಿರುವ ಆ ಸಮೂಹದ ಲಿಖಿತ ಮೂಲಕ ಉತ್ತರಿಸುವ ಒಟ್ಟು 23 ಪ್ರಶ್ನೆಗಳ ಪೈಕಿ 20 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ :— ಎಂ.ಆರ್.ಪಿ.ಎಲ್. ಕೈಗಾರಿಕಾ ಪ್ರದೇಶದ ಸಂತ್ರಸ್ತ ಕುಟುಂಬಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.

1(222) ಶ್ರೀ ಕುಂಭೆ ಸುಂದರರಾವ್ (ಸೂರತ್‌ಕಲ್) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಯೋಜನೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಎಂ.ಆರ್.ಪಿ.ಎಲ್. ಕೈಗಾರಿಕೆಯ ಪ್ರದೇಶದ ಸಂತ್ರಸ್ತ ಕುಟುಂಬಗಳ ಸಂಖ್ಯೆ ಎಷ್ಟು? ಅವರುಗಳನ್ನು ಸ್ಥಳಾಂತರಿಸುವನಂತರ ಅವರಿಗೆ ಸೂಕ್ತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ?

ಅ) ಸಂತ್ರಸ್ತ ಕುಟುಂಬಗಳ ಸೌಲಭ್ಯ ನಿರ್ವಹಣೆಯನ್ನು ಹೊತ್ತ ಕಿಐಎಡಿಬಿಯವರು ಕೊಟ್ಟ ಆಶ್ವಾಸನೆಯ ಪ್ರಕಾರ ಎಲ್ಲಾ ಸೌಲಭ್ಯಗಳನ್ನು ಒದಗಿಸುವಲ್ಲಿ ಸಫಲರಾಗಿದ್ದರೆಯೇ, ಇಲ್ಲವಾದಲ್ಲಿ ಕಾರಣಗಳೇನು?

ಇ) ಮೂಲಭೂತ ಸೌಕರ್ಯಗಳಿಂದ ವಂಚಿತರಾದ ಈ ಸಂತ್ರಸ್ತ ಕುಟುಂಬಗಳಿಗೆ ಯಾವುದೇ ವಿಳಂಬವಿಲ್ಲದೇ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಬಿ.ಎಲ್. ಶಂಕರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಯೋಜನೆಗಳ ಸಚಿವರು) :—

ಅ) ಎಂ.ಆರ್.ಪಿ.ಎಲ್. ಮತ್ತು ಎಚ್.ಪಿ.ಸಿ.ಎಲ್. ಕೈಗಾರಿಕೆಯ ಪ್ರದೇಶದ ಸಂತ್ರಸ್ತ ಕುಟುಂಬಗಳ ಸಂಖ್ಯೆ 609. ಇವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಲಾಗಿದೆ.

ಆ) ಸರ್ಕಾರದ ಸುತ್ತೋಲೆ ಕ್ರಮಾಂಕ ಆರ್‌ಡಿ ನಂ. 118 ಎಲ್‌ಪಿ 92, ದಿನಾಂಕ: 18-12-1992ರ ಆದೇಶದಂತೆ ನಿರ್ವಸಿತರಿಗೆ ಪುನರ್‌ವಸತಿ ಕಾಲೋನಿಯಲ್ಲಿ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ.

ಇ) ಎಂ.ಆರ್.ಪಿ.ಎಲ್. ಪುನರ್‌ವಸತಿ ಕಾಲೋನಿಯಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :— ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಕೊರತೆ.

2(204) ಶ್ರೀ ಕುಂಭಿ ಸುಂದರರಾವ್ (ಸುರತ್ಕಲ್) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಳಕೆಗಾಗಿ ಎಷ್ಟು ಕಿಲೋವ್ಯಾಟ್ ವಿದ್ಯುಚ್ಛಕ್ತಿಯ ಅವಶ್ಯಕತೆ ಇದೆ.

ಆ) ಪ್ರಸ್ತುತ ಸರಬರಾಜು ಆಗುತ್ತಿರುವ ವಿದ್ಯುಚ್ಛಕ್ತಿಯ ಪ್ರಮಾಣ ಎಷ್ಟು?

ಇ) ಕೊರತೆಯನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಳಕೆಗಾಗಿ 180 ಮೆ.ವ್ಯಾ (1,80,000 ಕಿಲೋವ್ಯಾಟ್) ವಿದ್ಯುಚ್ಛಕ್ತಿಯ ಅವಶ್ಯಕತೆ ಇದೆ.